# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 856

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 13.12.2023

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿವಿಧ ರೀತಿಯ ಸರ್ಕಾರಿ ಭೂಮಿಯನ್ನು ಖಾಸಗಿ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಅತಿಕ್ರಮಣ ಮಾಡಿರುವುದನ್ನು ಸರ್ಕಾರ ಗಮನಿಸಿದೆಯೇ; ಇಲ್ಲಿಯವರೆಗೆ ಸರ್ಕಾರಿ ಭೂಮಿಯ ಅತಿಕ್ರಮಣದ ಪ್ರಮಾಣ ಎಷ್ಟು; ಅತಿಕ್ರಮಣದ ಉದ್ದೇಶಗಳೇನು; (ಜೀವನಾಧಾರಕ್ಕಾಗಿಯೇ, ವಾಣಿಜ್ಯ ಕೃಷಿಯೇ, ಭೂ ಕಬಳಿಕೆಗಾಗಿಯೇ ಇತ್ಯಾದಿಗಳನ್ನು ಪರಿಶೀಲಿಸಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ವಿವಿಧ ರೀತಿಯ ಸರ್ಕಾರಿ ಭೂಮಿಯನ್ನು ಖಾಸಗಿ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ರಾಜ್ಯದಲ್ಲಿ ಒಟ್ಟು 63,32,486 ಎಕರೆ ಜಮೀನಿದ್ದು ಈ ಪೈಕಿ 1472493 ಎಕರೆ ಒತ್ತುವರಿಯನ್ನು ಗುರುತಿಸಲಾಗಿದೆ. ಇದರಲ್ಲಿ ನಮೂನೆ-50, 53 ಹಾಗೂ 57 ಮತ್ತು ಕಲಂ 94ಸಿ ರಡಿಯಲ್ಲಿ 1054035 ಎಕರೆ ಜಮೀನು ಹಾಗೂ 11031 ಎಕರೆ ಜಮೀನು ನ್ಯಾಯಾಲಯ ಪ್ರಕರಣಗಳು ಹಾಗೂ 17686 ಎಕರೆ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಒತ್ತುವರಿಯಾಗಿರುತ್ತದೆ. |
| ಆ) | ರಾಜ್ಯದಲ್ಲಿ ಸರ್ಕಾರಿ ಭೂಮಿಯ ಅತಿಕ್ರಮಣ ಕುರಿತು ರಚಿಸಿದ ವಿವಿಧ ಸಮಿತಿ ವರದಿಗಳನ್ನು ಸರ್ಕಾರ ಪರಿಶೀಲಿಸಿದೆಯೇ; ಸರ್ಕಾರಿ ಭೂಮಿಯ ಅತಿಕ್ರಮಣವನ್ನು ತೆರವು ಮಾಡುವಲ್ಲಿ ಸರ್ಕಾರದ ಕ್ರಮಗಳೇನು; ಅತಿಕ್ರಮವನ್ನು ತೆರವು ಮಾಡುವರು ಸಮಯ ಮತ್ತು ಗುರಿ ಹಾಗೂ ಜವಾಬ್ದಾರಿ ನಿಗಧಿಪಡಿಸಿ ಕ್ರಮ ಜರುಗಿಸುವರೆ ಸರ್ಕಾರವು ಯಾವ ಕಾರ್ಯತಂತ್ರ ರೂಪಿಸಿದೆ; (ವಿವರ ನೀಡುವುದು) | ಸರ್ಕಾರಿ ಜಮೀನುಗಳ ಒತ್ತುವರಿ ಗುರುತಿಸಿ ಸಂರಕ್ಷಿಸಲು ಮಾರ್ಗೋಪಾಯಗಳನ್ನು ಸೂಚಿಸಲು ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನಮಂಡಲದ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು.<br><br>ಜಂಟಿ ಸದನ ಸಮಿತಿಯು, ಮಧ್ಯಂತರ ವರದಿಯ ಭಾಗ-1ನ್ನು ದಿನಾಂಕ:20.12.2006 ರಂದು ಹಾಗೂ ಭಾಗ-2ನ್ನು ದಿನಾಂಕ:12.07.2007ರಂದು ಅಂಗೀಕರಿಸಿದೆ.<br><br>ರಾಜ್ಯದಲ್ಲಿ ಸರ್ಕಾರಿ ಜಮೀನಿನ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br><br>ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯದ ಎಲ್ಲಾ ಜಿಲೆಗಳಲ್ಲಿ, ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ಪಡೆಗಳನ್ನು ರಚಿಸಲಾಗಿದೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು, ಒತ್ತುವರಿ ಆಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸುತ್ತಿದ್ದಾರೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 20 ಎಲ್‌ಜಿಪಿ 2020, ದಿ: 20.01.2020 ರಂತೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು /ಭೂ ಕಬಳಿಕೆಗೆ ದುಪ್ರೇರಣೆ ನೀಡಲು ನಕಲಿ ದಾಖಲೆಗಳನ್ನು ಸೃಷ್ಟಿಸಲು ಶಾಮೀಲಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ. |

ಬೆಂಗಳೂರು ಜಿಲ್ಲೆಯಲ್ಲಿ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಇಂಡೆಕ್ಸಿಂಗ್ ಅಂಡ್ ಕ್ಯಾಟಲಾಗಿಂಗ್ ಮತ್ತು ಸ್ಕ್ಯಾನಿಂಗ್ ಮಾಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಸ್ಕ್ಯಾನಿಂಗ್ ಹಾಗೂ ಇಂಡೆಕ್ಸಿಂಗ್ ಕಾರ್ಯ ಪ್ರಗತಿಯಲ್ಲಿದೆ.

ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ಜಮೀನುಗಳನ್ನು ಫ್ಲಾಗ್ ಮಾಡಲಾಗುತ್ತಿದೆ. ಇದರಿಂದ ಸರ್ಕಾರಿ ಜಮೀನುಗಳ ಅನಧಿಕೃತ ವಹಿವಾಟು ಮಾಡಲು ಹಾಗೂ ಅನಧಿಕೃತ ಋಣಭಾರಗಳನ್ನು ಸೃಷ್ಟಿಸಲು ಅವಕಾಶ ವಿರುವುದಿಲ್ಲ. ಕಾವೇರಿ ಹಾಗೂ ಭೂಮಿ ತಂತ್ರಾಂಶದ ಜೋಡಣೆಯಾಗಿರುವುದರಿಂದ ಯಾವುದೇ ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಮಾರಾಟ ಮಾಡಲು ಹಾಗೂ ಖರೀದಿಸಲು ಅವಕಾಶವಿರುವುದಿಲ್ಲ.

<u>ಬೀಟ್ ತಂತ್ರಾಂಶ(Beat App)</u>: ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಮಾಡಿ ಒತ್ತುವರಿಗಳಿಂದ ರಕ್ಷಣೆ ಮಾಡುವ ಸಲುವಾಗಿ ಬೀಟ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಿಂದಾಗಿ ಎಲ್ಲಾ ರೀತಿಯ ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಹದ್ದುಬಸ್ತು ಮೂಲಕ ಒತ್ತುವರಿಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ತಂತ್ರಾಂಶದಲ್ಲಿ ಇಂದೀಕರಿಸಲು ಅವಕಾಶ ನೀಡಲಾಗುತ್ತದೆ. ಸದರಿ ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ವಿಡಿಯೋ ಮಹಜರ್ ಮತ್ತು ಭಾವಚಿತ್ರಗಳನ್ನು ಅಪ್ಲೋಡ್(Upload) ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯಾಗಿ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ನಿರಂತರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡಲು ತಂತ್ರಾಂಶವು ಸಹಾಯಕಾರಿಯಾಗಿರುತ್ತದೆ. ಸದ್ಯದಲ್ಲಿಯೇ ಬೀಟ್ ತಂತ್ರಾಂಶವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು.

ಒತ್ತುವರಿಯಿಂದ ತೆರವುಗೊಳಿಸಲಾದ ಸರ್ಕಾರಿ ಜಮೀನುಗಳಿಗೆ ಕಂದಕ, ತಂತಿಬೇಲಿ ಹಾಕಿ ಮತ್ತು ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ವಹಿಸಲಾಗುತ್ತಿದೆ.

ಖೋಟ್ಟಿ ದಾಖಲೆಗಳು ಸೃಷ್ಟಿಯಾಗಿರುವಂತಹ ಪ್ರಕರಣಗಳಲ್ಲಿ ದಾಖಲೆಗಳ ನೈಜತೆ ಪರಿಶೀಲನೆಗಾಗಿ Forensic Lab ಗಳಿಗೆ ಕಳುಹಿಸಲು ಕ್ರಮ ವಹಿಸಲಾಗುತ್ತಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ವಿಶೇಷ ಜಾರಿದಳ ಕೋಶ ರಚಿಸಲಾಗಿದೆ.

ಭೂಮಿ ತಂತ್ರಾಂಶದಲ್ಲಿ ಯಾವುದೇ ಆರ್.ಟಿ.ಸಿ ಯನ್ನು ಸರ್ಕಾರದ ಹೆಸರಿನಿಂದ ಖಾಸಗಿ ವ್ಯಕ್ತಿಯ ಹೆಸರಿಗೆ ಬದಲಾವಣೆ ಮಾಡುವ ಮೊದಲು ತಹಶೀಲ್ದಾರರ ಅನುಮೋದನೆ ಕಡ್ಡಾಯ ವಾಗಿರುತ್ತದೆ.

ಯಾವುದೇ ಹೊಸ ಸರ್ವೆ ನಂಬರ್ ಸೃಜಿಸಲು ಅಥವಾ ಸರ್ವೆ ನಂಬರ್ ತೆಗೆದು ಹಾಕಲು (ಡಿಲೀಷನ್) ಮಾಡಲು ಭೂಮಿ ತಂತ್ರಾಂಶದಲ್ಲಿ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಯವರ ಆದೇಶ ದೊಂದಿಗೆ ಕ್ರಮವಹಿಸಲು ಅವಕಾಶವನ್ನು ನೀಡಲಾಗಿದೆ.

| | | |
|---|---|---|
| | | ಯಾವುದೇ ಭೂ ಮಂಜೂರಾತಿ ಸಂದರ್ಭದಲ್ಲಿ ನಮೂನೆ 1 ರಿಂದ 5 ತುಂಬಲು ಇದ್ದ Manual ಪದ್ಧತಿಯನ್ನು ತೆಗೆದುಹಾಕಿದ್ದು ತಂತ್ರಾಂಶದ ಮೂಲಕ ಭರ್ತಿ ಮಾಡಲು ಅವಕಾಶ ಮಾಡಲಾಗಿದೆ.<br><br>ಯಾವುದೇ ಸರ್ಕಾರಿ ಭೂಮಿ ಮೇಲೆ ಅನಧಿಕೃತವಾಗಿ ಮಾಡಿರುವ ಖಾತೆ ಬದಲಾವಣೆಯ ಸಂಬಂಧ ಕರ್ನಾಟಕ ಭೂಕಂದಾಯ ಕಾಯ್ದೆ-1964ರ ಕಲಂ 136(3)ರಡಿ ಜಿಲ್ಲಾಧಿಕಾರಿಗಳು ಸುಮೋಟೊ ಪ್ರಕರಣ ದಾಖಲಿಸಿ ವಿಚಾರಣೆಗೆ ಅವಕಾಶವಿರುತ್ತದೆ. |
| ಇ) | ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಸರ್ಕಾರಿ ಜಾಗವನ್ನು ಈಗಾಗಲೇ ಜಾಗ ಇರುವವರಿಗೇ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸ್ವಂತ ಭೂಮಿ ಹೊಂದಿರುವ ಹಾಗೂ ಅವಿಭಜಿತ ಪಿತ್ರಾರ್ಜಿತ ಭೂಮಿಯ ಪಾಲುದಾರರ ಆಧಾರದ ಸಂಖ್ಯೆಗಳನ್ನು ಭೂಮಿ ತಂತ್ರಾಂಶದ ಪಹಣಿ/ಸರ್ವೆ ಸಂಖ್ಯೆಗಳಿಗೆ ಲಿಂಕ್ ಮಾಡುವ ಮೂಲಕ ತಪ್ಪು ಮಾಹಿತಿಯ ಮೂಲಕ ಸರ್ಕಾರ ಭೂಮಿ ಪಡೆಯುವುದನ್ನು ತಡೆಯುವ ಬಗ್ಗೆ ಸರ್ಕಾರ ಯೋಚಿಸಿದೆಯೇ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 170 ಟಿಆರ್‌ಎಂ 2023, ದಿನಾಂಕ: 21.11.2023ರನ್ವಯ ಪಹಣಿಯಲ್ಲಿ ಆಧಾರ್ ಸೀಡಿಂಗ್ ಮಾಡುವ ಕಾರ್ಯವನ್ನು ಉತ್ತೇಜಿಸಲು ಹಾಗೂ ರೂಪುರೇಷೆಗಳನ್ನು ಸಿದ್ದಪಡಿಸಲು ಆಯುಕ್ತರು, ಕಂದಾಯ ಆಯುಕ್ತಾಲಯ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. |
| ಈ) | ರಾಜ್ಯದ ವಿವಿದಡೆ ಜಾರಿಯಲ್ಲಿರುವ ಸೊಪ್ಪಿನ ಬೆಟ್ಟ/ಬಾನೆ/ಕುಮ್ಕಿ ಇತ್ಯಾದಿಗಳನ್ನು ಅಧಿನಿಯಮಗಳನುಸಾರ ನಿರ್ದಿಷ್ಟವಾಗಿ ಗುರುತಿಸಿ ಜಾಗದ ಮಿತಿಯನ್ನು ಇಲಾಖೆ ಗುರುತಿಸಿದೆಯೇ; ಜಾಗದ ಮಿತಿಯನ್ನು ಗುರುತಿಸದ ಹಿನ್ನೆಲೆಯಲ್ಲಿ ಅನೇಕರು ಕುಮ್ಕಿ ಜಾಗದ ಹೆಸರಿನಲ್ಲಿ ವಿಶಾಲವಾದ ಜಾಗಕ್ಕೆ ಬೇಲಿ ಹಾಕಿರುವುದು, ವಾಣಿಜ್ಯ ಬಳಕೆ ಮಾಡಿರುವುದನ್ನು ನಿಯಮಾನುಸಾರ ತೆರವುಗೊಳಿಸಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 79(2)ರಡಿ ಬೆಟ್ಟ, ಬಾಣೆ, ಕುಮ್ಕಿ ಜಮೀನುಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.<br><br>ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲದಲ್ಲಿ, ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 192-ಎ ರನ್ವಯ ದಾಖಲಿಸಲಾಗುತ್ತಿದೆ ಹಾಗೂ ಅಕ್ರಮವಾಗಿ ಪರಭಾರೆ ಮಾಡುತ್ತಿರುವವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 146 ಎಲ್‌ಜಿಕ್ಯೂ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು